# ತೊಗಲ ಹಾಲು

‘ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ / ಶೀಲ ಮಾಡತೀರಿ ನಾಡೆಲ್ಲಾ / ತೊಗಲಿನ ಆಟಾ ತಿಳಿಯದು ತಮ್ಮಾ/ ತೊಗಲು ಮಾತು ಒಂದು ಚೂರಿಲ್ಲಾ’ – ಇದು ಶಿಶುನಾಳ ಷರೀಫ ಸಾಹೇಬರು ಸಮಾಜದೊಳಗಿನ ಜಾತಿ, ಕುಲ ಎಂಬ ವರ್ಣ ವ್ಯವಸ್ಥೆಯನ್ನು ಖಂಡಿಸುವ ಕ್ರಮ. ಭೂಮಿಯಲ್ಲಿ ಹುಟ್ಟಿ, ತಾಯ ತೊಗಲ ಮೊಲೆಹಾಲು ಕುಡಿದು, ತೊಗಲನ್ನು ಹೊತ್ತು, ತೊಗಲಿನೊಂದಿಗೇ ಜೀವಿಸಬೇಕಾದ, ತೊಗಲು ಗೊಂಬೆಯಾಟವನ್ನು ಆಡಬೇಕಾದ ಮನುಷ್ಯನನ್ನು ಷರೀಫರು ಚಿತ್ರಿಸುತ್ತಾರೆ.

ಮತೀಯ ಸಾಮರಸ್ಯವನ್ನು ಉಳಿಸಿಕೊಂಡು ಬಂದ ದೇವಕಾರ್ ಮನೆತನದ ಹಜರತ್ ಇಮಾಮಸಾಹೇಬ ಮತ್ತು ಹಜ್ಜೂಮಾ ದಂಪತಿಯ ಮಗ ಮಹಮ್ಮದ ಷರೀಫ್, ಹಿಂದೂ ಮುಸ್ಲಿಂ ಐಕ್ಯತೆಯ ರೂಪಕವೆನಿಸಿದ ಶಿಶುನಾಳ ಷರೀಫ್ ಎಂಬ ಐತಿಹಾಸಿಕ ವ್ಯಕ್ತಿಯಾಗುತ್ತಾರೆ. ಬಾಲ್ಯದಿಂದಲೇ ಇಸ್ಲಾಂ ಧರ್ಮದ ಜೊತೆ, ಆ ಪ್ರದೇಶದ ಮಣ್ಣಿನಲ್ಲಿಯೇ ಸಹಜವಾಗಿ ಬೆರೆತುಹೋದ ಬಸವಾದಿ ಪ್ರಮಥರ ಶರಣಧರ್ಮದ ತತ್ವ ವಿಚಾರಗಳು ಅವರ ವ್ಯಕ್ತಿತ್ವವನ್ನು ರೂಪಿಸುತ್ತದೆ.

ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರ ಷರೀಫರು ಒಂದಷ್ಟು ಕಾಲ ಶಿಶುನಾಳದ ಅಕ್ಕಪಕ್ಕದ ಗ್ರಾಮಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ಶಾಲೆಯ ಗೋಡೆಗಳು ಲೌಕಿಕದ ಬಂಧನವೆನಿಸಿದಾಗ ಶಿಕ್ಷಕ ವೃತ್ತಿ ತೊರೆಯುತ್ತಾರೆ. ಅಧ್ಯಾತ್ಮದ ಹಸಿವನ್ನು ತಣಿಸಿಕೊಳ್ಳಲು ಗುಡಗೇರಿಯ ಕಲ್ಲೇಶ್ವರ ದೇವಾಲಯದಲ್ಲಿ ವೈದಿಕಶಾಲೆ ನಡೆಸುವ ಗೋವಿಂದಭಟ್ಟರು ಅವರಿಗೆ ಸಿಗುತ್ತಾರೆ.

ಹಲವಾರು ಸಾಧಕರ ಸಾಧನೆಯ ಜೀವನದಲ್ಲಿ ಸದಾ ಕಾಲ ಗುರುವೊಬ್ಬ ಮುಖ್ಯ ಪಾತ್ರ ವಹಿಸುತ್ತಾನೆ. ಹತ್ತನೇ ಶತಮಾನದ ಮತ್ಸ್ಯೇಂದ್ರ ಹಾಗೂ ಗೋರಕ್ಷನಾಥನ ಸಂಗಮದಂತೆ ಇವರಿಬ್ಬರೂ ಸಂಗಮವೂ ಸಂಭವಿಸುತ್ತದೆ. ಈ ಅದ್ಭುತವಾದ ಸಾಹಚರ್ಯ ಲೋಕದ ಕಣ್ಣಿನಲ್ಲಿ ಒಪ್ಪಿತವಲ್ಲ. ಇದು ಜಾತಿಮತಗಳ ಸಂಕೋಲೆಯನ್ನು ದಾಟಿದ್ದು, ಲೌಕಿಕವಾದ ಗುರುಪೀಠಗಳ ಶಿಷ್ಟಾಚಾರಗಳನ್ನು ಮೀರಿದ್ದಾಗಿತ್ತು. ಕೊಡುವ ಗುರು, ಪಡೆಯುವ ಶಿಷ್ಯರ ಈ ಸಂಬಂಧವನ್ನು ಲೌಕಿಕ ಲೆಕ್ಕಾಚಾರಗಳ ಜಗತ್ತು ಒಪ್ಪಿಕೊಳ್ಳುವುದಿಲ್ಲ. ಷರೀಫರು ತಮ್ಮ ಸಾಂಗತ್ಯವನ್ನು ‘ನನ್ನೊಳಗೆ ನಾ ತಿಳಕೊಂಡೆ/ ಎನಗೆ ಬೇಕಾದ ಗಂಡನ್ನ ಮಾಡಿಕೊಂಡೆ' ಎಂದು ವರ್ಣಿಸುತ್ತಾರೆ. ಷರೀಫರನ್ನು ಅವರ ಜನಾಂಗದವರು, ಗೋವಿಂದಭಟ್ಟರನ್ನು ಸ್ಮಾರ್ಥ ಬ್ರಾಹ್ಮಣರು ಕೊಂಕುನುಡಿಗಳಿಂದ ಟೀಕಿಸುತ್ತಾರೆ.

ತಂದೆತಾಯಿಗೆ ನಿರಾಶೆ ಮಾಡಲೊಲ್ಲದ ಷರೀಫರು ಅವರ ಬಯಕೆಯಂತೆಯೇ ವಿವಾಹ ಬಂಧನಕ್ಕೆ ಒಳಗಾಗುತ್ತಾರೆ. ಹೆಂಡತಿಯನ್ನು ಮಗಳು, ತಾಯಿಯ ರೂಪದಲ್ಲಿ ಕೃತಜ್ಞತೆಯಿಂದ ಕಾಣುತ್ತಾರೆ. ಮುಂದೆ ದಾಂಪತ್ಯದಲ್ಲಿ ಮಗಳೊಬ್ಬಳ ಜನನ ಹಾಗೂ ಮರಣ ಸಂಭವಿಸುತ್ತದೆ. ಅದರ ಬೆನ್ನ ಹಿಂದೆಯೇ ಹೆಂಡತಿ ಘಾತಿಮಾಳೂ ತೀರಿಕೊಳ್ಳುತ್ತಾಳೆ. ‘ಮೋಹದ ಹೆಂಡತಿ ತೀರಿದ ಬಳಿಕ / ಮಾವನ ಮನೆಯ ಹಂಗಿನ್ನ್ಯಾಕೋ’ ಎಂದು ಪ್ರಾಪಂಚಿಕ ಬಂಧನಗಳಿಂದ ಹೊರಬರುತ್ತಾರೆ. ನಂತರ ಗುರುಗಳು ತಮ್ಮ ಶಿಷ್ಯನಲ್ಲಿ ಅಳಿದುಳಿದಿದ್ದ ಮೋಹಮಾಯೆಗಳನ್ನು ಕಳೆಯುವಂತೆ ಮಾಡಿ ಚಿತ್ತಶುದ್ಧಿ, ಏಕಾಗ್ರತೆಯನ್ನು ನೆಲೆಗೊಳಿಸುತ್ತಾರೆ.

ಗುರುಶಿಷ್ಯರ ಈ ಸಂಬಂಧ ಗೋವಿಂದಭಟ್ಟರು ತೀರಿಕೊಳ್ಳುವವರೆಗೂ ಮುಂದುವರೆಯುತ್ತದೆ. ಗುರುವಿನೊಂದಿಗೆ ಏರ್ಪಟ್ಟಿದ್ದ ಆಧ್ಯಾತ್ಮಿಕ ಸಂಬಂಧ ಅವರ ನಿಧನವನ್ನು ನಿರ್ಲಿಪ್ತವಾಗಿ ತೆಗೆದುಕೊಳ್ಳುವಂತೆ ಮಾಡುತ್ತದೆ. ಮುಂದೆ ಶಾಂತಿ ಮತ್ತು ಮುಕ್ತಿಗಾಗಿ ಬಾಲಲೀಲಾಮಹಾಂತ ಸ್ವಾಮಿಗಳು, ಗರಗದ ಮಡಿವಾಳಪ್ಪನವರು, ನವಲಗುಂದದ ನಾಗಲಿಂಗಪ್ಪನವರು, ಹುಬ್ಬಳ್ಳಿಯ ಸಿದ್ಧಾರೂಢರು, ಅವರಾದಿ ಫಲಾಹಾರಸ್ವಾಮಿಗಳು ಮುಂತಾದವರನ್ನು ಅವರು ಸಂದರ್ಶಿಸುತ್ತಾರೆ.

ತಮ್ಮ ಅಂತ್ಯಕಾಲದಲ್ಲಿ ಶರಣರ ಮಾರ್ಗದಲ್ಲಿ ದೇಹತ್ಯಾಗ ಮಾಡುವ ನಿರ್ಧಾರ ಮಾಡುತ್ತಾರೆ. ಈ ವಿಧಿವಿಧಾನದಲ್ಲಿ ಜಂಗಮ ಪಾದಪೂಜೆ ಹಾಗೂ ಜಂಗಮನೊಬ್ಬನು ತನ್ನ ಪಾದವನ್ನು ಷರೀಫರ ಮಸ್ತಕದ ಮೇಲೆ ಇಡುವ ಅಗತ್ಯವಿತ್ತು. ಆ ವಿಧಿಗಳಿಗೆ ಯಾವೊಬ್ಬ ಜಂಗಮನು ಮುಂದೆ ಬರದಿದ್ದಾಗ ಹಿರೇಮಠದ ಕರಿಬಸವಯ್ಯನವರು ಷರೀಫರ ಅಂತಿಮ ಇಚ್ಛೆಯನ್ನು ಪೂರೈಸುತ್ತಾರೆ. ಈ ಘಟನೆ ಜುಲೈ 3ರ 1889ರಂದು ನಡೆಯುತ್ತದೆ.

ಎಂದೋ ಚರಿತ್ರೆಯಲ್ಲಿ ನಡೆದುಹೋದ ತಪ್ಪುಗಳನ್ನು ಇಂದು ಸರಿ ಮಾಡಲೆಂದು ಹೊರಟಿರುವವರ ನಡುವೆ ಷರೀಫರು ತರ್ಕಕ್ಕೆ ಸಿಗದವರಾಗುತ್ತಾರೆ. ಬದುಕಿನುದ್ದಕ್ಕೂ ಏಕಕಾಲಕ್ಕೆ ಹಿಂದೂ ಮತ್ತು ಮುಸ್ಲಿಂ ಆಗಿದ್ದವರವರು. ಅವರ ಶಿಷ್ಯರಲ್ಲಿ ಅಂತ್ಯಕ್ರಿಯೆಯನ್ನು ಯಾವ ಧರ್ಮಕ್ಕನುಸಾರವಾಗಿ ಮಾಡಬೇಕೆಂಬ ಗೊಂದಲವುಂಟಾದಾಗ ಒಪ್ಪಂದವೊಂದನ್ನು ಮಾಡಿಕೊಳ್ಳಲಾಗುತ್ತದೆ. ಏಕಕಾಲಕ್ಕೆ ಅಲ್ಲಾ ಹೋ ಅಕ್ಬರ್, ಹರಹರ ಮಹಾದೇವ ಎಂಬ ಘೋಷಗಳು ಕೇಳಿಬರುತ್ತವೆ.

ಷರೀಫರ ಗದ್ದುಗೆ ಯಾವುದೇ ಧರ್ಮಕ್ಕೆ ಅಂಟಿಕೊಳ್ಳದ ಒಂದು ವಿಶಾಲವಾದ ಕಟ್ಟೆಯಾಗಿದೆ. ನೆರಳು ಚಾಚಿದ ಮರಬಳ್ಳಿಗಳಿಂದ ಕೂಡಿದ ಅದರ ಎಡಬದಿಯಲ್ಲಿ ಮುಸ್ಲಿಮರು ನಮಾಜು ಮಾಡಿ ಸಕ್ಕರೆ ಓದಿಸಿದರೆ, ಬಲಭಾಗದಲ್ಲಿ ಹಿಂದೂಗಳು ಹಣ್ಣುಕಾಯಿ ಕರ್ಪೂರಗಳಿಂದ ಪೂಜಿಸುತ್ತಾರೆ.

ಜಾಡರ ಗುರುಪಾದಪ್ಪನವರು ಷರೀಫರು ಹಾಡಿದ ಹಾಡುಗಳನ್ನು ಕಾಪಾಡಿದವರಲ್ಲಿ, ಹಾಡುತ್ತಿದ್ದವರಲ್ಲಿ ಮುಖ್ಯನಾದ ಶಿಷ್ಯ. ಮುಂದೆ ಜಾತಿಗೇರ ದೇವೇಂದ್ರಪ್ಪನೆಂಬ ಹಾಡುಗಾರ ಈ ಪರಂಪರೆಯನ್ನು ಕಾಪಾಡುತ್ತಾರೆ. ಅವರ ಶಿಷ್ಯರಾದ ಹರಕೂಣಿ ಯಲ್ಲಪ್ಪ ಹಾಗೂ ಆತನ ಶಿಷ್ಯ ಅರ್ಜುನಪ್ಪ ಮಡಿವಾಳರ ತಮ್ಮ ಹಾಡುಗಾರಿಕೆಯಿಂದ ಷರೀಫರ ಹಾಡುಗಳನ್ನು ಜೀವಂತವಾಗಿರಿಸುತ್ತಾರೆ.

ಷರೀಫರು ಕಾಲಜ್ಞಾನಿಗಳಾಗಿದ್ದು, ಪ್ಲೇಗ್ ಬಗ್ಗೆ ಹಾಡಿದ ಹಾಡೊಂದು ಆಸಕ್ತಿದಾಯಕವಾಗಿದೆ. ಕಂಪನಿ ಸರ್ಕಾರ ಆಳುತ್ತಿದ್ದಾಗ ರೋಗದ ಮುನ್ಸೂಚನೆ ಕೊಡುವಂತೆ ಇಲಿಗಳು ಸತ್ತು ಬೀಳತೊಡಗುತ್ತವೆ. ಆಗ, ಸರ್ಕಾರ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಯ ಬಗ್ಗೆ ಷರೀಫರು ಬರೆಯುತ್ತಾರೆ. ‘ತಗುಲಬಾರದು ರೋಗ ಒಬ್ಬರೊಬ್ಬರಿಗೆ, ಅಗಲಿಸಿ ಊರಬಿಡಿಸಿ ಹೊರಗ್ಹಾಕಿಸಿ, ಮಿಗಿಲಾದ ಕ್ವಾರೆಂಟು ಕಟ್ಟಿಸುವಾ’ ಎನ್ನುವ ಸಾಲುಗಳಲ್ಲಿ, ‘ಕ್ವಾರಂಟು’ ಎಂಬ ಪದ ಬಳಸುತ್ತಾರೆ.

ಷರೀಫರು ಬದುಕಿನುದ್ದಕ್ಕೂ ನಿಷ್ಠುರವಾದಿಯಾಗಿ, ನಿಷ್ಠುರ ಸತ್ಯಗಳನ್ನು ಹೇಳುತ್ತಲೇ ಬದುಕಿದರು. ಒಂದೆಡೆ ನೆಲೆ ನಿಲ್ಲದೆ ಸರ್ವಜ್ಞನಂತೆ ನಾಡಿನುದ್ದಕ್ಕೆ ಚಲಿಸಿದವರು. 15ನೇ ಶತಮಾನದಲ್ಲಿ ಷರೀಫರಂತೆ ಬದುಕಿದ್ದ ಸಂತನೆಂದರೆ ಕಬೀರ. ಇಬ್ಬರೂ ನಾವು ಅನುಸರಿಸಬೇಕಾದ ಧಾರ್ಮಿಕ ಸಾಮರಸ್ಯದ ಮಾದರಿಯಾಗಿದ್ದಾರೆ.

**■ ಅಮೃತಮತಿ**

## ಮಾತೇ ಮುತ್ತು

- ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ. ಇಲ್ಲವಾದರೆ ನಮ್ಮ ಮನಸ್ಸನ್ನು ಸದೃಢವಾಗಿ ಮತ್ತು ಶುದ್ಧ ಅಂತಃಕರಣದಿಂದ ಇಟ್ಟುಕೊಳ್ಳಲು ಸಾಧ್ಯವಾಗದು.
  –ಗೌತಮ ಬುದ್ಧ
- ಸರಳತನವು ಪರಿಪೂರ್ಣತೆಯ ಲಕ್ಷಣ.
  –ಪಂಡಿತ ತಾರಾನಾಥ
- ನಮ್ಮ ನಿರ್ಧಾರಗಳು ಕೆಲವೊಮ್ಮೆ ಸೂಕ್ತವಾಗಿ ಇರುವುದಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಂತಹ ವೈಫಲ್ಯವನ್ನು ಅರ್ಥ ಮಾಡಿಕೊಳ್ಳುವುದು ಯಶಸ್ಸಿನ ಒಂದು ಭಾಗವಾಗಿರುತ್ತದೆ.
  –ಅರಿಯನ್ನಾ ಹಫಿಂಗ್ಟನ್
- ಮನುಷ್ಯ ವಿನಾಶದ ಅಂಚಿನಲ್ಲಿದ್ದಾಗಲೂ ಬದುಕಿನ ತಂತು ಎಟುಕೀತೆ ಎಂದು ಅರಸಬೇಕು.
  –ಶಿವರಾಮ ಕಾರಂತ
- ಜಗತ್ತಿನ ಪರಮೋಚ್ಚ ಧರ್ಮವೆಂದರೆ ನಮ್ಮ ಮೂಲ ಸ್ವರೂಪದಲ್ಲಿ, ಅಂತಃಸತ್ವದಲ್ಲಿ ನಂಬಿಕೆಯಿಡುವುದು.
  –ಸ್ವಾಮಿ ವಿವೇಕಾನಂದ